# ಲೋಕಕ್ಷೇಮ

ಕ್ಷೇಮ ಎಂದರೆ ಒಳಿತು, ನೆಮ್ಮದಿ, ಸೌಖ್ಯ ಎಂದು ಅರ್ಥ. 'ಸ್ಥಿತಸ್ಯ ಪಾಲನಂ ಕ್ಷೇಮಃ' ಎಂದು ಪ್ರಾಚೀನರು ಇದಕ್ಕೆ ವಿವರಣೆ ನೀಡಿದ್ದಾರೆ. ನಮ್ಮ ಪೂರ್ವಿಕರು ಪತ್ರ ಬರೆಯುವಾಗ 'ನಿಮ್ಮಗಳ ಕ್ಷೇಮ ಸಮಾಚಾರಕ್ಕೆ ಕಾಗದ ಬರೆಯುವುದು' ಎಂದೋ 'ನೀವು ಕ್ಷೇಮವಾಗಿದ್ದೀರೆಂದು ನಾವು ತಿಳಿಯುತ್ತೇವೆ' ಎಂದೋ ಪತ್ರಗಳಲ್ಲಿ ಒಕ್ಕಣೆ ಇರುತ್ತಿತ್ತು.

ಈ ಒಕ್ಕಣೆಗಳು ಕೆಲವೊಮ್ಮೆ ವ್ಯಕ್ತಿಗತವಾಗಿ ಅಥವಾ ಕುಟುಂಬದ ಸದಸ್ಯರನ್ನು ಉದ್ದೇಶಿಸಿಯೋ ಇರುತ್ತಿತ್ತು. ಇದರ ಜತೆಗೆ ಸಮುದಾಯದ ಅಥವಾ ದೇಶದ 'ಕ್ಷೇಮ' ಕುರಿತು ಚಿಂತನೆಯೂ ಇರುತ್ತಿತ್ತು. 'ಲೋಕಾಃ ಸಮಸ್ತಾಃ ಸುಖಿನೋ ಭವಂತು' ಎಂಬುದು ಬಲು ಪ್ರಾಚೀನವಾದ ಮಾತು. ಈ ಮಾತಿನಲ್ಲಿ 'ಲೋಕಾಃ ಸಮಸ್ತಾಃ' ಎಂಬ ಸಕೀಲ ಪದವುಂಟಷ್ಟೆ? ನಾವು ಬದುಕುತ್ತಿರುವ ಲೋಕದಲ್ಲಿ ಏನುಂಟು, ಏನಿಲ್ಲ? ಇಲ್ಲಿ ಎಲ್ಲವೂ ಉಂಟು. ಇಲ್ಲಿ ಮನುಷ್ಯನ ಜಾಲವೂ ಉಂಟು; ಪ್ರಾಣಿ ಪಕ್ಷಿಗಳ ಜಾಲವೂ ಉಂಟು! ಇವೆಲ್ಲವೂ 'ಸಮಸ್ತಲೋಕ' ಎಂಬ ಕಲ್ಪನೆಯ ನೆಲೆಯಲ್ಲಿ ಬೆಳೆದು ಬಂದಿದೆ. ಈ ಸಮಸ್ತ ಲೋಕವೂ ಕ್ಷೇಮವ್ಯಾಪಾರದಲ್ಲಿ ಇರಲೇ ಬೇಕಷ್ಟೆ. ಅದು ಹಾಗಿದ್ದರೆ ಮಾತ್ರ ಚೆನ್ನ. ವ್ಯಕ್ತಿಗಳಿಂದ ಕುಟುಂಬ, ಇಂಥ ಹಲವು ಕುಟುಂಬಗಳಿಂದ ಸಮುದಾಯ; ಇಂಥ ಹತ್ತಾರು ಸಮುದಾಯಗಳು ಸೇರಿದರೆ ಬೃಹತ್ ಸಮಾಜ; ಇಂಥ ನೂರಾರು ಸಮುದಾಯಗಳು ಸೇರಿದರೆ ದೇಶ. ಕಾಳಿದಾಸ ಒಂದೆಡೆ 'ಸುಭಿಕ್ಷೋಽಯಂ ದೇಶಃ' ಎಂದು ನುಡಿದಿದ್ದಾನೆ.

ಇವೆಲ್ಲವೂ 'ಲೋಕಕ್ಷೇಮ'ದ ಅತ್ಯುನ್ನತ ಸ್ಥಿತಿಯನ್ನು ವ್ಯಂಜಿಸುತ್ತವೆ. ಹನ್ನೆರಡನೆಯ ಶತಮಾನದಲ್ಲಿದ್ದ 'ಅಲ್ಲಮಪ್ರಭು' ಕೂಡ ಲೋಕಕ್ಷೇಮ ಕಾತರನಾಗಿದ್ದವನೇ. ಅವನ ವ್ಯಕ್ತಿತ್ವವನ್ನೂ ಲೀಲಾಜಗತ್ತನ್ನೂ ತಿಳಿಸುವ ಚಾಮರಸನೆಂಬ ಶಿವಕವಿಯ 'ಪ್ರಭುಲಿಂಗಲೀಲೆ'ಯಲ್ಲಿ ಹೇಳುವ ಮಾತುಗಳು ಸರ್ವಗ್ರಾಹಿ ಎನಿಸುತ್ತವೆ. ಅಲ್ಲಮನ ಕಣ್ಣೆಳಕಿಗೆ ಬಿದ್ದರೆ ಸಾಕು ಎಲ್ಲವೂ ಲೋಕಕ್ಷೇಮದ ಪ್ರತಿಮೆಗಳೇ ಆಗಿಬಿಡುತ್ತವೆ. ಸತ್ಕವಿ ಚಾಮರಸನ ಮಾತು ಹೀಗಿದೆ:

ಆತನಲ್ಲಮ ಸಕಲ ಸಮಯ<br>
ಪ್ರೀತನಲ್ಲಿಯು ಶೈವದಲಿ ಸಂ<br>
ಪ್ರೀತನದರೊಳು ವೀರಶೈವದಲತಿ ಮಹಾಪ್ರೀತ (25.09)

ಅಲ್ಲಮನು ಬದುಕಿದ್ದ ಕಾಲದಲ್ಲಿ ಜೈನ, ಶೈವ, ಶಾಕ್ತ, ಕಾಪಾಲಿಕ, ಕಾಳಾಮುಖ, ಪ್ರತ್ಯಭಿಜ್ಞಾ, ಸಿದ್ಧ, ನಾಥ ಮುಂತಾದ ಹತ್ತಾರು ಪಂಥಗಳು ದೇಶದಾದ್ಯಂತ ಇದ್ದವು. ಆಯಾ ಪಂಥದವರೆಲ್ಲರಿಗೂ ಅಲ್ಲಮಪ್ರಭು ಸಂಪ್ರೀತನೇ ಆಗಿದ್ದ. ಇನ್ನು ಶೈವ–ವೀರಶೈವದ ಬಗೆಗೆ ಹೇಳುವಂತಿಲ್ಲ. ಸಕಲ ಸಾಧನಾಪಂಥಗಳೂ ಅದರ ಗುರುಸ್ಥಾನೀಯರೂ ಅಲ್ಲಮನ ಬಗೆಗೆ ಒಲವನ್ನೂ ತೋರಿಸುತ್ತಿದ್ದರು. ಹಾಗೆ ನೋಡಿದರೆ 'ಸಕಲಧರ್ಮದೀಪಕ' ಅಲ್ಲಮಪ್ರಭುವೇ ಆಗಿದ್ದ. ಇದು ಲೋಕ್ಷೇಮವನ್ನು ತಾತ್ವಿಕನೆಲೆಯಲ್ಲಿ ಕಾಣುವ ಒಂದು ಪರಿ!

ಚಾಮರಸನು ಅಲ್ಲಮನ ಬಗೆಗೆ, ಇನ್ನೊಂದು ಬಗೆಯಲ್ಲಿ ಅಂತಃಕರಣ ತುಂಬಿ ವರ್ಣಿಸುತ್ತಾನೆ. ಇದು ವರ್ಣನೆ ಮಾತ್ರವಲ್ಲ; ಇದು ಆ ಕಾಲದ ಮಟ್ಟಿಗೆ ತಥ್ಯವೇ ಸರಿ! ಚಾಮರಸ ಹೇಳುವ ಮಾತು ಹೀಗಿದೆ:

ಬಾಲರನು, ವೃದ್ಧರನು, ಭೂಮೀ<br>
ಪಾಲರನು, ಬಡವರನು, ಸದಮಲ<br>
ಶೀಲರನು, ಗುಣಿಗಳನು, ಗೋ–ಬ್ರಾಹ್ಮಣರನು, ಭಕ್ತರನು<br>
ಲೋಲತೆಯಲಿ ಸಮಸ್ತಜಾತಿಯ<br>
ಜಾಲವನು ಸರ್ವರನು ಕರುಣಿಸಿ<br>
ಪಾಲಿಸುತಲಿರುತಿರ್ದನೆಮ್ಮಯ ಗುರು ಗುಹೇಶ್ವರನು (25.21)

ಈ ಲೋಕದಲ್ಲಿ ಅನೇಕ ಬಗೆಯವರು ಇದ್ದಾರೆ. ಅವರು ಅನೇಕ ಬಗೆಯ ಸಂಕಟಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರನ್ನು ಕೈಹಿಡಿದು ಎತ್ತಬಲ್ಲವರು ಬೇಕಷ್ಟೆ? ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಕೈಹಿಡಿಯಲು ಬರುತ್ತಾರೆ. ಅವರು ಲೋಕದ ಬಲ್ಲಿದರನ್ನೂ ಎತ್ತುತ್ತಾರೆ; ಬಲವಿಲ್ಲದವರನ್ನೂ ಎತ್ತುತ್ತಾರೆ! ಅಲ್ಲಮಪ್ರಭು ಚಿಕ್ಕವರನ್ನೂ ದೊಡ್ಡವರನ್ನೂ ಪರಿಶುದ್ಧ ಚಾರಿತ್ರೆವುಳ್ಳವರನ್ನೂ ಮೇಲಕ್ಕೆ ಎತ್ತುತ್ತಿದ್ದ. ಇಷ್ಟು ಮಾತ್ರವಲ್ಲ, ಜಾಣರಿಗೆ, ಉತ್ತಮೋತ್ತಮ ಶರಣರಿಗೆ, ಬಡವರಿಗೆ, ಸರ್ವಕಲೆಗಳಲ್ಲಿ ನೈಪುಣ್ಯ ಪಡೆದವರ ಕಡೆಯೂ ಕೈನೀಡಿ ಎತ್ತುತ್ತಿದ್ದ. ಸಮಾಜದಲ್ಲಿರುವ ಯೋಗ್ಯರಾದವರ ವಾಮಕ್ಷೇಮ ನೋಡಿಕೊಳ್ಳುವುದರತ್ತ ಗಮನಿಸುತ್ತಿದ್ದ. ಸಚರಾಚರರಿಗೆ ದಿನನಿತ್ಯ ಕರುಣೆಯನ್ನು ಕೃಪೆ ಮಾಡುತ್ತಿದ್ದ! ಇಂಥವನು ನಮ್ಮ ಅಲ್ಲಮ.

ಹೀಗಾಗಿ ಅಲ್ಲಮಪ್ರಭು ಎಲ್ಲರ ಕ್ಷೇಮ ಕಾತರನಾಗಿದ್ದನೆಂಬುದು ಋತಸತ್ಯ. ಅವನ ಬಳಿಗೆ ಕಿರಿಯರೂ ಹಿರಿಯರೂ ಬರುತ್ತಿದ್ದರು. ಸಜ್ಜನರೂ ಗುಣಿಗಳೂ ಬರುತ್ತಿದ್ದರು. ಅವನ ಬಳಿಗೆ 'ಸಮಸ್ತಜಾತಿಯ ಜಾಲ'ವೇ ಬಂದು ಅವನ ಸುತ್ತವೇ ನೆರೆಯುತ್ತಿತ್ತು. ಇದು ಅಲ್ಲಮನ ಲೋಕ್ಷೇಮದ ಪರಿ. ಲೋಕಕ್ಕೆ ಇಂಥವರು ಶತಮಾನಕ್ಕೊಬ್ಬರು ಅವತರಿಸುತ್ತಾರೆ. ಇಂಥ ರೀತಿಯಲ್ಲಿ ಬರುವುದಕ್ಕೆ ಲೋಕಾರುಣ್ಯವೇ ಕಾರಣವೆಂದರೆ ತಪ್ಪಾಗಲಾರದು! ನಾವು ಉಳ್ಳವರನ್ನು ಒಂದು ರೀತಿ ನೋಡುತ್ತೇವೆ; ಇಲ್ಲದವರನ್ನು ಮತ್ತೊಂದು ರೀತಿ ನೋಡುತ್ತೇವೆ. ನಮ್ಮದು ತಾರತಮ್ಯ ಪ್ರಪಂಚ. ಇದು 'ಲೋಕಕ್ಷೇಮ'ವನ್ನು ಹಿಂದಕ್ಕೆ ಸರಿಸುತ್ತದೆ. ನಮ್ಮ ಬದುಕಿನ ರೀತಿ ವೈಯಕ್ತಿಕವಾದುದು. ಇದು ಸಾಮಷ್ಟಿಕ ಆಗಬೇಕು! ಅಲ್ಲಮನು ಸಾಮಷ್ಟಿಕ ರೂಪದ ಸಂಕೇತವಾಗಿ ನಮ್ಮ ಎದುರು ನಿಂತಿದ್ದಾನೆ. ಒಬ್ಬ ಗಾಂಧೀಜಿ, ಒಬ್ಬ ಬಸವಣ್ಣ, ಒಬ್ಬ ಬುದ್ಧ, ಒಬ್ಬ ಕ್ರಿಸ್ತ – ಹೀಗೆ ಕಾಲಾನುಕಾಲಕ್ಕೆ ಬಂದು 'ಲೋಕಕ್ಷೇಮ'ದ ಕಾತರರಾಗಿ ನಮ್ಮನ್ನು ಕೈಹಿಡಿದು ಎತ್ತುತ್ತಾರೆ. ಅಲ್ಲಮನು ನಮ್ಮ ನಾಡಿನ 'ಧರ್ಮದೀಪಕ'ನೂ ಹೌದು; 'ಲೋಕಕ್ಷೇಮ' ದೀಪಂಕರನೂ ಹೌದು! ಇಂಥವರು ನಮಗೆ ಯಾವತ್ತೂ ಬೇಕು. ಇಂಥವರಿಂದ ಸಂಸ್ಕೃತಿಲೋಕ ಮತ್ತು ಜನಲೋಕ ಬದುಕುತ್ತಲೇ ಇರುತ್ತದೆ!

■ ಪುರಂಜೀವಿ

## ಮಾತೇ ಮುತ್ತು

- ತಪ್ಪೆಸಗದಂತೆ ಪ್ರತಿ ನಾಗರಿಕನನ್ನೂ ಕಾಯುವುದು ಸರ್ಕಾರದಿಂದ ಆಗದ ಕೆಲಸ. ಆದರೆ, ಸರ್ಕಾರ ತಪ್ಪು ಮಾಡದಂತೆ ನೋಡಿಕೊಳ್ಳಬೇಕಾದ ಹೊಣೆ ನಾಗರಿಕನ ಮೇಲೆ ಇರುತ್ತದೆ.

  –ರಾಬರ್ಟ್ ಜಾಕ್ಸನ್

- ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಿಮ್ಮಲ್ಲಿ ಪ್ರಬಲವಾಗಿದ್ದರೆ ಸೋಲು ಎಂದಿಗೂ ನಿಮ್ಮನ್ನು ಹಿಮ್ಮೆಟ್ಟಿಸುವುದಿಲ್ಲ.

  –ಎ.ಪಿ.ಜೆ. ಅಬ್ದುಲ್ ಕಲಾಂ

- ಭವಿಷ್ಯವನ್ನು ನಾವೇ ರೂಪಿಸಿಕೊಂಡರೂ ಅದು ವಿಧಿ ಎಂದುಕೊಳ್ಳುವುದು ಮೂಢತನ.

  –ಲೋಕೋಕ್ತಿ

- ಬದುಕಿನ ಕೊನೆಯಲ್ಲಿ ನಮ್ಮ ಪದವಿ, ಹಣ ಮಹತ್ಕಾರ್ಯಗಳಿಂದ ನಮ್ಮನ್ನು ಅಳೆಯುವುದಿಲ್ಲ. ಇಲ್ಲದವರಿಗೆ ನಾವು ನೀಡಿದ ಅನ್ನ, ನೆರಳು, ಬಟ್ಟೆಯ ಮೇಲೆ ನಮ್ಮನ್ನು ಅಳೆಯಲಾಗುತ್ತದೆ.

  –ಮದರ್ ತೆರೇಸಾ

- ಅಹಂ ಹೇಳುತ್ತದೆ, 'ಒಮ್ಮೆ ಎಲ್ಲವೂ ಸರಿಯಾದರೆ ನನಗೆ ಶಾಂತಿ ದೊರೆಯುತ್ತದೆ'. ಚೈತನ್ಯ ಹೇಳುತ್ತದೆ, 'ಶಾಂತಿಯನ್ನು ಹುಡುಕಿಕೋ ಆಗ ಎಲ್ಲವೂ ಸರಿಯಾಗುತ್ತದೆ'.

  –ಮೆರಿಯಾನ್ ವಿಲಿಯಂ

- ಆಧ್ಯಾತ್ಮಿಕ ಜೀವನದಲ್ಲಿ ಪವಾಡವು ಒಂದು ದೊಡ್ಡ ಆತಂಕ.

  –ಸ್ವಾಮಿ ವಿವೇಕಾನಂದ

- ಮನಸ್ಸಿನ ವಿಕಾಸವು ಮಾನವನ ಅಸ್ತಿತ್ವದ ಅಂತಿಮ ಗುರಿಯಾಗಿರಬೇಕು.

  –ಬಿ.ಆರ್. ಅಂಬೇಡ್ಕರ್

- ಮುನ್ನಡೆ ಸಾಧಿಸಿದರೆ ಸಾಲದು, ಮೇಲ್ನಡೆ ಸಾಧಿಸುವುದು ಮನುಷ್ಯನ ಗುರಿಯಾಗಬೇಕು.

  –ಕೆ.ಎಸ್. ನಿಸಾರ್ ಅಹಮದ್

- ಅಹಂಕಾರಿ ಮನುಷ್ಯ ಒಂಟಿಯಾಗಿ ಇರಬೇಕಾಗುತ್ತದೆ.

  –ಚೆನ್ನವೀರ ಕಣವಿ